# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ: 1370

ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 24.12.2021

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆಯಲ್ಲಿ ದಿನದ ಬಸ್ ಪ್ರಯಾಣಿಕರ ಸಂಖ್ಯೆಯೆಷ್ಟು; ಅದಕ್ಕನುಗುಣವಾಗಿ ಬಸ್ ಸಂಚಾರ ಇದೆಯೇ; ಇದ್ದಲ್ಲಿ, ಎಷ್ಟು ಸಂಖ್ಯೆಯ ಬಸ್‌ಗಳಿವೆ; | ಬೀದರ್ ಜಿಲ್ಲೆಯಲ್ಲಿ ಒಂದು ದಿನದ ಬಸ್ ಪ್ರಯಾಣಿಕರ ಸಂಖ್ಯೆ ಸರಾಸರಿ 1,18,772. ಸದರಿ ಪ್ರಯಾಣಿಕರ ಸುಗಮ ಸಂಚಾರಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ 585 ಬಸ್‌ಗಳನ್ನು ಒದಗಿಸಲಾಗಿದೆ. |
| ಆ. | ಎಲ್ಲಾ ಹಳ್ಳಿಗಳಿಗೆ ಸಮರ್ಪಕವಾದ ಬಸ್ ಸಂಚಾರದ ವ್ಯವಸ್ಥೆಯಿದೆಯೇ; ಸಮರ್ಪಕವಾದ ಬಸ್ ಸಂಚಾರ ಇಲ್ಲದ ಗ್ರಾಮಗಳೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಬೀದರ್ ವಿಭಾಗದಲ್ಲಿ ಒಟ್ಟು 667 ಗ್ರಾಮಗಳಿದ್ದು, ಅವುಗಳಲ್ಲಿ ಒಟ್ಟು 664 ಗ್ರಾಮಗಳಿಗೆ ಬಸ್ ಸಂಚಾರ ಕಲ್ಪಿಸಲಾಗಿದೆ. ಇನ್ನುಳಿದ 03 ಗ್ರಾಮಗಳಿಗೆ ಬಸ್ ಸಂಚಾರ ಒದಗಿಸಿರುವುದಿಲ್ಲ. ಸದರಿ ವಿವರವನ್ನು 'ಅನುಬಂಧ' ದಲ್ಲಿ ನೀಡಲಾಗಿದೆ. |
| ಇ. | ಅನೇಕ ಗ್ರಾಮಗಳಿಗೆ ಸಮರ್ಪಕವಾದ ಬಸ್ ವ್ಯವಸ್ಥೆಯಿಲ್ಲದೆ ಬಡ ಮಕ್ಕಳು ಶಾಲೆಯಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಗ್ರಾಮಗಳಿಗೆ ಬಸ್ಸುಗಳ ಸಂಚಾರ ವ್ಯವಸ್ಥೆ ಯಾವಾಗ ಮಾಡಲಾಗುವುದು; | ಕೋವಿಡ್-19ರ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ ಸಾರಿಗೆಗಳನ್ನು ಶಾಲಾ-ಕಾಲೇಜು ಪ್ರಾರಂಭವಾದ ತಕ್ಷಣ ಎಲ್ಲಾ ಸಾರಿಗೆಗಳನ್ನು ಪುನ: ಕಾರ್ಯಾಚರಣೆ ಮಾಡಲಾಗುತ್ತಿದೆ.<br>ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಶಾಲಾ-ಕಾಲೇಜು ಸಮಯಕ್ಕೆ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. |
| ಈ. | ಜಿಲ್ಲೆಯಲ್ಲಿರುವ ಬಸ್‌ಗಳಲ್ಲಿ ಹೆಚ್ಚು ಕಿ.ಮೀ ಓಡಿರುವ ಬಸ್‌ಗಳ ಸಂಖ್ಯೆಯೆಷ್ಟು; ಕಡಿಮೆ ಕಿ.ಮೀ. ಓಡಿರುವ ಬಸ್‌ಗಳ ಸಂಖ್ಯೆಯೆಷ್ಟು? | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಅಶೋಕ ಲೈಲ್ಯಾಂಡ, ಟಾಟಾ ಹಾಗೂ ತತ್ಸಮಾನ ಮಾದರಿಯ ಸಾಮಾನ್ಯ ಬಸ್ಸುಗಳ ಜೀವಮಾನವನ್ನು 9.00 ಲಕ್ಷ ಕಿ.ಮೀ. ಹಾಗೂ ಕರೋನಾ ಹವಾನಿಯಂತ್ರಿತ ಸ್ಲೀಪರ್ ಬಸ್ಸುಗಳ ಜೀವಮಾನವನ್ನು 11.00 ಲಕ್ಷ ಕಿ.ಮೀ.ಗೆ ನಿಗದಿಪಡಿಸಲಾಗಿರುತ್ತದೆ.<br>ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿರುವ 6 ಘಟಕಗಳಲ್ಲಿ ಒಟ್ಟಾರೆ 585 |

| | | |
|---|---|---|
| | | ಬಸ್ಸುಗಳಿದ್ದು, ಈ ಪೈಕಿ 178 ಬಸ್ಸುಗಳು 9.00 ಲಕ್ಷ ಕಿ.ಮೀ. ಕ್ರಮಿಸಿದ್ದು, ಇನ್ನುಳಿದ 407 ಬಸ್ಸುಗಳು 9.00 ಲಕ್ಷ ಕಿ.ಮೀ.ಗಿಂತ ಕಡಿಮೆ ಕ್ರಮಿಸಿರುವಂತಹ ವಾಹನಗಳಾಗಿರುತ್ತವೆ. |

ಸಂಖ್ಯೆ: ಟಿಡಿ 310 ಟಿಸಿಕ್ಯೂ 2021

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು

ಪ್ರ ಸಂ: 1370 ಕ್ಕೆ **ಅನುಬಂಧ**

| ಕ್ರ.ಸಂ | ತಾಲೂಕು | ಒಟ್ಟು ಗ್ರಾಮಗಳ ಸಂಖ್ಯೆ | ಸಾರಿಗೆ ಸೌಲಭ್ಯ ಒದಗಿಸಿದ ಗ್ರಾಮಗಳ ಸಂಖ್ಯೆ | ಸಾರಿಗೆ ಸೌಲಭ್ಯ ಒದಗಿಸಬೇಕಾದ ಗ್ರಾಮಗಳ ಸಂಖ್ಯೆ |
|---|---|---|---|---|
| 1 | ಬೀದರ | 95 | 95 | 0 |
| 2 | ಹುಮನಾಬಾದ | 151 | 151 | 0 |
| 3 | ಬಸವಕಲ್ಯಾಣ | 47 | 47 | 0 |
| 4 | ಭಾಲ್ಕಿ | 131 | 130 | 1 |
| 5 | ಔರಾದ | 134 | 133 | 1 |
| 6 | ಕಮಲನಗರ | 54 | 53 | 1 |
| 7 | ಹುಲಸೂರ | 18 | 18 | 0 |
| 8 | ಚಿಟ್ಟಗುಪ್ಪ | 37 | 37 | 0 |
| | ಒಟ್ಟು | 667 | 664 | 3 |

| ಕ್ರ. ಸಂ. | ತಾಲೂಕು | ಗ್ರಾಮದ ಹೆಸರು | ಸಾರಿಗೆ ಸೌಲಭ್ಯ ಒದಗಿಸದೇ ಇರಲು ಕಾರಣ | ಸಾರಿಗೆ ಗ್ರಾಮಕ್ಕೆ ಪ್ರಸ್ತುತ ಎಲ್ಲಿವರೆಗೆ ಬಸ್ ಸೇವೆ ಒದಗಿಸಲಾಗಿದೆ. |
|---|---|---|---|---|
| 1 | ಕಮಲನಗರ | ಮುತಖೇಡ | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 2.5 ಕಿ.ಮೀ ಅಂತರದಲ್ಲಿರುತ್ತದೆ. ಪ್ರಸ್ತುತ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿ ಪೂರ್ಣಗೊಂಡ ನಂತರ ಸಾರಿಗೆ ಸೌಲಭ್ಯ ಒದಗಿಸಲಾಗುವುದು. | ಔರಾದ-ದಾಬಕಾ-ಉದಗೀರ ಮಾರ್ಗ ವಾಗಿ ದಿನಾಲು 05 ಸರತಿಗಳ ಬಸ್ ಕಾರ್ಯಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 2 | ಔರಾದ | ನಾಗೂರ (ಬಾಬಜಿ) | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 1 ಕಿ.ಮೀ ಅಂತರದಲ್ಲಿದ್ದು, ಗ್ರಾಮದ ಒಳಗೆ ಬಸ್ ತಿರುಗಿಸಲು ಸ್ಥಳ ಇರುವುದಿಲ್ಲ. | ಔರಾದ-ಸಂತಪೂರ-ಸಂಗಮ ಕ್ರಾಸ್ ಮಾರ್ಗವಾಗಿ ಭಾಲ್ಕಿಗೆ ಪ್ರತಿದಿನ 20 ಸರತಿಗಳ ಕಾರ್ಯಾಚರಣೆಯಲ್ಲಿದ್ದು, ಸದರಿ 20 ಸರತಿಗಳು ನಾಗೂರ (ಬಾಬಜಿ) ಮುಖ್ಯ ರಸ್ತೆಗೆ ನಿಲುಗಡೆ ಮಾಡುತ್ತಿವೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 3 | ಭಾಲ್ಕಿ | ಎಕಲಾಸಪೂರ | ಸದರಿ ಗ್ರಾಮವು ಆನಂದವಾಡಿ ಗ್ರಾಮದಿಂದ 5 ಕಿ.ಮೀ ಅಂತರದಲ್ಲಿರುತ್ತದೆ. ಸದರಿ ಗ್ರಾಮಕ್ಕೆ ಇಲ್ಲಿಯವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ. | ಭಾಲ್ಕಿ ಪಟ್ಟಣದಲ್ಲಿ ರಸ್ತೆಯು ತೀರಾ ಇಕ್ಕಟ್ಟಾಗಿರುವುದರಿಂದ ಬಸ್ ಕಾರ್ಯಚರಣೆಗೆ ಯೋಗ್ಯವಾಗಿರುವುದಿಲ್ಲ. ಅನಂದ ವಾಡಿವರೆಗೆ 03 ಸುತ್ತುವಳಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |